**ಅಸಲು ದಾವಾ ನಂಃ 115/2016**
**ಪಿ.ಡಬ್ಲ್ಯೂಃ -01**

**ದಿನಾಂಕಃ 05.01.2022 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆಃ 4 ಮತ್ತು 5 ರ ಆದೇಶದ ಮೇರೆಗೆ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ.ಆರ್., 1 ನೇ ಪ್ರತಿವಾದಿ ಪರ ವಕೀಲರಿಂದ**

2. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆಯನ್ನು ದಾಖಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ರಿ.ಸ.ನಂ. 37/5 ರಲ್ಲಿ ಎಷ್ಟು ಪೋಡುಗಳಾಗಿವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ದಾವಾ ಜಮೀನಿನ ಚಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ದಾವಾ ಸ್ವತ್ತನ್ನು ನಾನು ವೃಷಬೇಂದ್ರಪ್ಪ ಮತ್ತು ಅವರ ಹೆಂಡತಿ ಸಿದ್ದಮ್ಮ ಇವರಿಂದ ಖರೀದಿ ಮಾಡಿರುತ್ತೇನೆ. ಸದರಿ ದಾವಾ ಸ್ವತ್ತನ್ನು ನಾನು ಖರೀದಿ ಮಾಡಿ ಅಂದಾಜು 15 ವರ್ಷಗಳಾಗಿರುತ್ತವೆ, ಆದರೆ ನಿಖರವಾಗಿ ತಾರೀಖು ಮತ್ತು ತಿಂಗಳುಗಳನ್ನು ಹೇಳಲು ಬರುವುದಿಲ್ಲ.

3. ನಾನು ಖರೀದಿ ಮಾಡಿದ ದಿನವೇ ವೃಷಬೇಂದ್ರಯ್ಯ ಮತ್ತು ಇವರ ಹೆಂಡತಿ ಮಕ್ಕಳಿಂದ 1 ನೇ ಪ್ರತಿವಾದಿಯು ಸಹ ತನ್ನ ಪ್ರತಿವಾದ ಪತ್ರದ ಸ್ವತ್ತನ್ನು ಖರೀದಿಸಿರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿ ಖರೀದಿಗೆ ತೆಗೆದುಕೊಂಡಂತಹ ಜಮೀನು ನನ್ನ ಜಮೀನಿನ ಪಕ್ಕದಲ್ಲಿಯೇ ಇರುತ್ತದೆ ಎಂದರೆ ಸರಿ. ನನ್ನ ಜಮೀನಿನ ಉತ್ತರ ಭಾಗಕ್ಕೆ 1 ನೇ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಜಮೀನಿನ ಪೂರ್ವ-ಪಶ್ಚಿಮವಾಗಿ ಒಂದು ಬಿಂದು ಇದ್ದು ಅದು ನನ್ನ ಮತ್ತು 1 ನೇ ಪ್ರತಿವಾದಿಯ ಜಮೀನನ್ನು ಬೇರ್ಪಡಿಸುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದು ಯಾರಿಗೂ ಅಡ್ಡಿಆತಂಕಪಡಿಸುತ್ತಿಲ್ಲ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಋುದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ.